SL. No. : NNN

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 96-K** **Code No. : 96-K**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 01. 04. 2017 ] [ Date : 01. 04. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳಲ್ಲಿ ಇದು ಒಂದು

   (A) ಕಲ್ಲಿದ್ದಲು

   (B) ಸೌರಶಕ್ತಿ

   (C) ಪವನ ಶಕ್ತಿ

   (D) ಉಬ್ಬರವಿಳಿತ ಶಕ್ತಿ

2. ಅಲ್ಯೂಮಿನಿಯಂನ ತಯಾರಿಕೆಯಲ್ಲಿ ಕಚ್ಚಾವಸ್ತುವಾಗಿ ಬಳಸಲ್ಪಡುವ ಅದಿರು ಇದಾಗಿದೆ

   (A) ಕಬ್ಬಿಣದ ಅದಿರು

   (B) ಮ್ಯಾಂಗನೀಸ್ ಅದಿರು

   (C) ಅಭ್ರಕ

   (D) ಬಾಕ್ಸೈಟ್ ಅದಿರು

3. ವಿಶ್ವದಲ್ಲಿ ಕುಟುಂಬ ಯೋಜನೆಯನ್ನು ಮೊದಲ ಬಾರಿಗೆ ಜಾರಿಗೊಳಿಸಿದ ರಾಷ್ಟ್ರ

   (A) ಶ್ರೀಲಂಕಾ

   (B) ಚೀನಾ

   (C) ಭಾರತ

   (D) ಬಾಂಗ್ಲಾದೇಶ

4. ಬ್ರಿಟಿಷರ ಕಾಲದಲ್ಲಿ ರೈತರೇ ನೇರವಾಗಿ ಕಂದಾಯವನ್ನು ಸರ್ಕಾರಕ್ಕೆ ಕಟ್ಟುತ್ತಿದ್ದ ಪದ್ಧತಿ

   (A) ರೈತವಾರಿ

   (B) ಮಹಲ್ವಾರಿ

   (C) ಜಮೀನ್ದಾರಿ

   (D) ಜಹಗೀರ್ದಾರಿ

5. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು

(A) ನಬಾರ್ಡ್

(B) ಸಹಕಾರಿ ಬ್ಯಾಂಕು

(C) ಭಾರತೀಯ ಸ್ಟೇಟ್ ಬ್ಯಾಂಕು

(D) ಭೂ ಅಭಿವೃದ್ಧಿ ಬ್ಯಾಂಕು

6. ಭಾರತದಲ್ಲಿ ಮೊದಲು ರೈಲು ಹಳಿಗಳನ್ನು ಅಳವಡಿಸಿದು

(A) ಬೆಂಗಳೂರು ಮತ್ತು ಮದ್ರಾಸ್ ನಡುವೆ

(B) ಕೊಲ್ಕತ್ತ ಮತ್ತು ರಾಣಿಗಂಜ್ ನಡುವೆ

(C) ಬಾಂಬೆ ಮತ್ತು ಥಾಣೆ ನಡುವೆ

(D) ಮದ್ರಾಸ್ ಮತ್ತು ಅರಕೋಣಮ್ ನಡುವೆ

7. ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ ಸಹಾಯಕವಾಗುವ ಅತಿ ವೇಗದ ಸಾರಿಗೆ ವ್ಯವಸ್ಥೆ

(A) ರಸ್ತೆ ಸಾರಿಗೆ

(B) ರೈಲು ಸಾರಿಗೆ

(C) ಜಲ ಸಾರಿಗೆ

(D) ವಾಯು ಸಾರಿಗೆ

8. ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಧಾನ ಕಚೇರಿ ಇರುವುದು

(A) ಅಹಮದಾಬಾದ್

(B) ಬೆಂಗಳೂರು

(C) ಮುಂಬೈ

(D) ದೆಹಲಿ

9. ಭಾರತವು ಅತ್ಯಂತ ಹೆಚ್ಚು ಆಮದು ಮಾಡಿಕೊಳ್ಳುವ ವಸ್ತು

(A) ಎಲೆಕ್ಟ್ರಾನಿಕ್ ಸರಕುಗಳು

(B) ಬೆಳ್ಳಿ

(C) ಯಂತ್ರೋಪಕರಣಗಳು

(D) ಪೆಟ್ರೋಲಿಯಂ

10. "ಕೈಗಾರಿಕೀಕರಣಗೊಳಿಸಿ ಇಲ್ಲವೇ ವಿನಾಶವಾಗಿ" ಎಂದು ಹೇಳಿದವರು

(A) ಮಹಾತ್ಮ ಗಾಂಧೀಜಿ

(B) ಸರ್ದಾರ್ ಪಟೇಲ್

(C) ಸರ್ ಎಂ. ವಿಶ್ವೇಶ್ವರಯ್ಯ

(D) ಜವಾಹರ್‌ಲಾಲ್ ನೆಹರೂ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಆರ್ಥಿಕ ಅಭಿವೃದ್ಧಿ ಎಂದರೇನು ?

12. ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ರೂಪಿಸಲು ಕಾರಣವೇನು ?

13. ಭಾರತದ ಯಾವ ರಾಜ್ಯವು ಅತ್ಯಂತ ಹೆಚ್ಚು ಚಿನ್ನವನ್ನು ಉತ್ಪಾದಿಸುತ್ತದೆ ?

14. ಜನಸಾಂದ್ರತೆ ಎಂದರೇನು ?

15. ನೀರಾವರಿ ಎಂದರೇನು ?

16. ಕೃಷಿ ಹಣಕಾಸನ್ನು ವ್ಯಾಖ್ಯಾನಿಸಿ.

17. ಭಾರತದಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಸ್ಥಾಪಿಸಲಾಗಿದೆ. ಏಕೆ ?

18. ರಾಷ್ಟ್ರೀಯ ಮಟ್ಟದ ಯಾವುದಾದರೂ ಎರಡು ಕಾರ್ಮಿಕ ಸಂಘಟನೆಗಳನ್ನು ಹೆಸರಿಸಿ.

19. ಕಾರ್ಮಿಕ ಎಂದರೆ ಯಾರು ?

20. ಬಡತನ ಎಂದರೇನು ?

21. ಭಾರತದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವವರು ಯಾರು ?

22. ಭಾರತೀಯ ರಿಸರ್ವ್ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು ?

23. ವ್ಯಾಪಾರ ಎಂದರೇನು ?

24. ಕಲ್ಲಿದ್ದಲ್ಲಿನ ವಿಧಗಳನ್ನು ಹೆಸರಿಸಿ.

III. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. ಅಭಿವೃದ್ಧಿ ಹೊಂದಿದ ದೇಶಗಳ ಲಕ್ಷಣಗಳು ಯಾವುವು ?

26. ಆರ್ಥಿಕ ಅಭಿವೃದ್ಧಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಪ್ರಾಮುಖ್ಯತೆ ಏನು ?

27. ಭಾರತದಲ್ಲಿ ಮರಣದರವು ಇಳಿಕೆಯಾಗಲು ಕಾರಣಗಳೇನು ?

28. ನೀರಾವರಿಯ ಪ್ರಮುಖ ವಿಧಗಳು ಯಾವುವು ?

29. ಲೇವಾದೇವಿದಾರರು ರೈತರನ್ನು ಹೇಗೆ ಶೋಷಿಸುತ್ತಾರೆ ?

30. ಕೃಷಿ ಹಣಕಾಸಿನ ಪ್ರಕಾರಗಳಾವುವು ?

31. ಸಣ್ಣ ಪ್ರಮಾಣದ ಕೈಗಾರಿಕೆಗಳ ಸಮಸ್ಯೆಗಳನ್ನು ಪಟ್ಟಿ ಮಾಡಿ.

32. ಕೈಗಾರಿಕಾ ಕಾರ್ಮಿಕರ ಲಕ್ಷಣಗಳನ್ನು ತಿಳಿಸಿ.

33. ಕಾರ್ಮಿಕ ಸಂಘಗಳ ಪ್ರಮುಖ ಉದ್ದೇಶಗಳು ಯಾವುವು ?

34. ಬಡತನವು ಸುರೇಶ್ ತೆಂಡೂಲ್ಕರ್ ಅವರಿಂದ ಹೇಗೆ ವ್ಯಾಖ್ಯಾನಿಸಲ್ಪಟ್ಟಿದೆ ?

35. ನಗರ ಪ್ರದೇಶದ ಬಡವರಿಗಾಗಿ ಸರ್ಕಾರದ ಕಾರ್ಯಕ್ರಮಗಳನ್ನು ಹೆಸರಿಸಿ.

36. ಆರ್ಥಿಕಾಭಿವೃದ್ಧಿಯಲ್ಲಿ ಸಾರಿಗೆಯ ಮಹತ್ವವೇನು ?

37. ಮೂಲಭೂತ ಸೌಕರ್ಯಗಳ ವಿಧಗಳಾವುವು ?

38. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಪ್ರಕಟಣೆಗಳನ್ನು ಹೆಸರಿಸಿ.

39. ಭಾರತದ ಪ್ರಮುಖ ರಫ್ತುಗಳನ್ನು ಪಟ್ಟಿ ಮಾಡಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಅನಭಿವೃದ್ಧಿ ರಾಷ್ಟ್ರಗಳ ಆರ್ಥಿಕತೆಯ ಲಕ್ಷಣಗಳನ್ನು ತಿಳಿಸಿ.

***ಅಥವಾ***

ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಯ ಲಕ್ಷಣಗಳನ್ನು ತಿಳಿಸಿ.

41. ಹಸಿರು ಕ್ರಾಂತಿಯ ಪ್ರಯೋಜನಗಳು ಯಾವುವು ?

***ಅಥವಾ***

ಹನಿ ನೀರಾವರಿಯ ಪ್ರಯೋಜನಗಳು ಯಾವುವು ?

42. ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ತಿಳಿಸಿ.

***ಅಥವಾ***

ಕೈಗಾರಿಕಾ ಕಾರ್ಮಿಕರ ಪ್ರಮುಖ ಸಮಸ್ಯೆಗಳನ್ನು ತಿಳಿಸಿ.

43. ಬಡತನಕ್ಕೆ ಪ್ರಮುಖ ಕಾರಣಗಳು ಯಾವುವು ?

***ಅಥವಾ***

ಬಡತನ ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

44. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳನ್ನು ಪಟ್ಟಿ ಮಾಡಿ.

***ಅಥವಾ***

ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳನ್ನು ಪಟ್ಟಿ ಮಾಡಿ.

45. ಆಂತರಿಕ ಮತ್ತು ಬಾಹ್ಯ ವ್ಯಾಪಾರಗಳ ನಡುವಿನ ವ್ಯತ್ಯಾಸ ತಿಳಿಸಿ.

***ಅಥವಾ***

ವಿದೇಶಿ ವ್ಯಾಪಾರವು ಒಂದು ದೇಶಕ್ಕೆ ಹೇಗೆ ಸಹಕಾರಿಯಾಗಿದೆ ?

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ಅಥವಾ *ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಜನಸಾಂದ್ರತೆಯ ಮೇಲೆ ಪ್ರಭಾವಿಸುವ ಅಂಶಗಳನ್ನು ತಿಳಿಸಿ.

47. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಮಹತ್ವವನ್ನು ತಿಳಿಸಿ.